ಆಗ್ಲಾದ್ರೂ ಅವಳ ಮನಸ್ಸು ಸಮಾಧಾನ ಆಗ್ಬಹುದು...' ರಮ್ಯ ಸಲಹೆ ನೀಡಿದಳು.

'ಸರಿ ಹಾಗಾದ್ರೆ, ಇನ್ನೂ ಕಾಲೇಜ್ ಓಪನ್ ಆಗಿಲ್ವಲ್ಲ, ನಾಳೆ ಬೆಳಿಗ್ಗೆ ನೀವಿಬ್ರೂ ನಿಮ್ಮ ಪಿ.ಜಿ.ಯ ಹತ್ತಿರಕ್ಕೆ ಬಂದ್ಬಿಡಿ, ಬಂದ್ಮೇಲೆ ನಂಗೊಂದು ಮೆಸೇಜ್ ಮಾಡಿದ್ರೂ ಆಯ್ತು, ನಾನೇ ಬಂದು ನಿಮ್ಮಿಬ್ಬರನ್ನು ಭೇಟಿ ಮಾಡ್ತೀನಿ, ಈಗ ಸದ್ಯಕ್ಕೆ ಋತುವನ್ನು ಮಾತನಾಡಿಸುವುದು ಬೇಡ ಅನ್ಸುತ್ತೆ, ನನ್ನ ಜೊತೆ ಮಾತನಾಡಿದ್ರೆ ಅವಳ ಸಂಕಟ ಇನ್ನೂ ಹೆಚ್ಚಾಗ್ಬಹುದು, ನಾಳೆ ಇಬ್ರೂ ಮರೆಯದೇ ಬನ್ನಿ...' ಎಂದ ಹೇಮಂತ ಕರೆಯನ್ನು ತುಂಡರಿಸಿದ.

'ಹೇಮಂತ್ ಫೋನ್ ಮಾಡಿದ್ದು ಕಣೆ, ಅದನ್ನು ಕೇಳುವ ಆಸಕ್ತಿಯೂ ನಿಂಗಿಲ್ವಾ?...ಪುಣ್ಯಕ್ಕೆ ಅವ್ನಿಗೆ ಮೆಸೇಜ್ ಮಾಡಿದ್ರಿಂದ ನೀನು ಉಳಿದುಕೊಂಡೆ ಋತು, ನಿಮ್ಮ ಪ್ರೀತಿ ಉಳಿದುಕೊಳ್ತು, ನಾಳೆ ಬೆಳಿಗ್ಗೆ ನಮ್ಮ ಪಿ.ಜಿ.ಯ ಹತ್ತಿರಕ್ಕೆ ಹೇಮಂತ ಬರುವಂತೆ ಹೇಳಿದ್ದಾನೆ, ಅವನೊಂದಿಗೆ ಫ್ರೀಯಾಗಿ ಮಾತಾಡು....ಇನ್ಮೇಲೆ ಇಂಥಾ ನಿರ್ಧಾರವನ್ನು ನೀನ್ಯಾವತ್ತೂ ತೆಗೆದುಕೊಳ್ಳಬಾರ್ದು ಋತು....' ಎಂದ ರಮ್ಯ ಋತುವನ್ನು ಗಾಢವಾಗಿ ಆಲಂಗಿಸಿದಳು.

ಇಬ್ಬರ ಕಂಗಳೂ ಕಣ್ಣೀರಿನ ಕೊಳಗಳಾದವು. ಅದೆಷ್ಟೋ ಹೊತ್ತು ಇಬ್ಬರೂ ಅದೇ ಸ್ಥಿತಿಯಲ್ಲಿದ್ದರು.

***

ಮರುದಿನ ಮುಂಜಾನೆ ಕೋಟೆ ಬಂಗಲೆಯಲ್ಲಿ ಸ್ಮಶಾನ ಮೌನ ನೆಲೆಸಿತ್ತು. ಬಂಗಲೆಯ ಸುತ್ತಲಿನ ಗಿಡಮರಗಳಲ್ಲಿ ಹಕ್ಕಿಗಳು ತಮ್ಮ ಎಂದಿನ ಚಿಲಿಪಿಲಿಯಲ್ಲಿ ಇದ್ದುದನ್ನು ಬಿಟ್ಟರೆ ಮತ್ತೆಲ್ಲಾ ನೀರವವಾಗಿತ್ತು. ಭರತ ಎರಡು ವರ್ಷಗಳಿಂದ ಕುಳಿತುಕೊಳ್ಳುತ್ತಿದ್ದ ಅಕ್ವೇರಿಯಂನ ಮುಂದಿನ ಕುರ್ಚಿ, ಕಾರಂಜಿ ಉದ್ಯಾನವನ ಎಲ್ಲವೂ ಬರಿದಾಗಿತ್ತು. ಇಂದಲ್ಲಾ ನಾಳೆ ತಮ್ಮ ಬಂಗಲೆಯ ಯುವರಾಜ ಎಲ್ಲರಂತೆ ಮಾತನಾಡುತ್ತಾ ಸಹಜ ಸ್ಥಿತಿಗೆ ಬರಬಹುದು ಎಂದು ಕನಸು ಕಾಣುತ್ತಿದ್ದ ಕಲಾವತಿ ಹಾಗೂ ಪುರುಷೋತ್ತಮರಿಗೆ ಬಹಳ ದೊಡ್ಡ ಆಘಾತವೇ ಆಗಿತ್ತು.

ಪುರುಷೋತ್ತಮರು ಈ ದಿನ ಆಫೀಸಿಗೆ ಹೊರಡಲೇಬೇಕಾದ ಅವಸರವಿದುದ್ದರಿಂದ ಸಿದ್ಧವಾಗುತ್ತಿದ್ದವರು ಕೆಳಗಿಳಿದು ಬಂದ ಋತು, ರಮ್ಯರನ್ನು ನೋಡಿ ಒಣನಗೆ ಬೀರಿದರು. ಕಲಾವತಿಯೂ ಯಾಂತ್ರಿಕವಾಗಿ ಉಪಾಹಾರವನ್ನು ಸಿದ್ಧಪಡಿಸಿ ಡೈನಿಂಗ್ ಟೇಬಲ್ಲಿನ ಮೇಲಿಡುತ್ತಿದ್ದರು.

'ಭರತನ ವಿಷಯ ಎಲ್ಲರಿಗೂ ತಿಳಿದುಹೋಗಿದೆ. ಇನ್ನು ಆಫೀಸ್‌ನಲ್ಲಿ, ಕೋರ್ಟ್‌ನಲ್ಲಿ ಎಲ್ಲರನ್ನೂ ಹೀಗೆ ಫೇಸ್ ಮಾಡ್ಬೇಕು ಅಂತಾನೇ ಗೊತ್ತಾಗ್ತಿಲ್ಲ, ಪೆದ್ದನಂತಿದ್ದ ಭರತ ಈ ಮಟ್ಟಕ್ಕೆ ಇಳಿತಾನೆ ಅಂದ್ರೆ ಇನ್ನೂ ನಂಬೋಕೇ ಆಗ್ತಿಲ್ಲ...' ಪುರುಷೋತ್ತಮರು ನೊಂದು ನುಡಿದರು.

'ಅವ್ನು ಮನೋ ರೋಗಿಯಾಗಿದ್ರೆ ಅವ್ನಿಗೆ ಸರಿಯಾದ ಟ್ರೀಟ್‌ಮೆಂಟ್ ಕೊಡಿಸ್ಬಹುದಿತ್ತು, ಅದು ಬಿಟ್ಟು ಇಡೀ ಪ್ರಪಂಚಕ್ಕೆ ತಿಳಿಯೋ ಹಾಗೆ ಅವನನ್ನು ಆ ಹೇಮಂತ ಅರೆಸ್ಟ್ ಮಾಡಿಸ್ಬಿಟ್ಟ, ನನ್ನ ಮಗ ಜೈಲಿನಲ್ಲಿ ಎಷ್ಟು ನೋವು ಅನುಭವಿಸ್ತಾನೋ ಏನೋ, ಅವ್ನ ಟ್ರೀಟ್‌ಮೆಂಟ್ ಮುಗ್ದು ಅವ್ನು ನಾರ್ಮಲ್ ಮನುಷ್ಯ ಆಗೋವರ್ಗೂ ನಾವ್ಯಾರೂ ಅವ್ನನ್ನು ನೋಡ್ಬಾರ್ದೂಂತ ಬೇರೆ ಹೇಳಿದ್ದಾರಂತೆ, ಈ ಕೋಟೆ ಬಂಗ್ಲೇಲಿ ಇನ್ನೂ ಏನೇನು ಗ್ರಹಚಾರ ಕಾದಿದೆಯೋ...' ಕಲಾವತಿ ಸಿಡುಕಿದಳು.

'ಕಲಾ, ಏನು ಮಾತೂಂತ ಆಡ್ತಿದ್ದಿ, ನಮ್ಮ ಮಗ ಭರತ ಎಷ್ಟೇ ಮನೋರೋಗಿ ಅಂದ್ರೂ ಭೀಕರ ಕೊಲೆಗಳನ್ನು ಮಾಡಿದ ಸೀರಿಯಲ್ ಕಿಲ್ಲರ್ ಕಣೆ, ಅವ್ನು ಹೊರಗಿದ್ರೆ ಯಾವತ್ತೂ ಅಪಾಯವೇ. ಸದ್ಯಕ್ಕೆ ಅವ್ನು ಜೈಲಿನಲ್ಲಿದ್ದು ಟ್ರೀಟ್‌ಮೆಂಟ್ ತೊಗೊಳ್ಳೋದು ಒಳ್ಳೇದು, ಮುಂದೆ ಏನಾಗುತ್ತೋ ನೋಡೋಣ...' ಪುರುಷೋತ್ತಮರು ನಿಟ್ಟುಸಿರಿಡುತ್ತಾ ಹೇಳಿದರು.

'ಅಂಕಲ್, ಕಾಲೇಜು ಓಪನ್ ಆಗೋ ತನ್ಕ ನಿಮ್ಮ ಜೊತೆ ಇರೋಣ ಅಂತ ಬಂದೆ, ಸ್ವಲ್ಪ ಪಿ.ಜಿ.ಕಡೆ ಹೋಗಿ ಹಾಕಿಕೊಳ್ಳೋಕೆ ಡ್ರೆಸ್‌ಗಳನ್ನು ತರ್ತೀನಿ, ಹಾಗೇ ಋತುವನ್ನೂ ಕರ್ಕೊಂಡು ಹೋಗ್ತಾ ಅಂಕಲ್. ಅವ್ಳಿಗೂ ಒಂದು ಚೇಂಜ್ ಇರುತ್ತೆ....' ಮೆಲ್ಲನೆ ಬಾಯ್ಬಿಟ್ಟಳು ರಮ್ಯ. ಋತು ಆತ್ಮಹತ್ಯೆಗೆ ಯತ್ನಿಸಿದ್ದನ್ನು ಹೇಳದಿರುವುದೇ ಒಳ್ಳೆಯದೆನಿಸಿತು.

'ಸರಿ....ಬೇಗ ಹೋಗಿ ಬಂದ್ಬಿಡಿ, ಆದ್ರೆ ಋತು....ನಿಂಗಿನ್ನು ಆ ಹೇಮಂತನ ಸಹವಾಸ ಸಾಕು, ಇನ್ನು ಅಪ್ಪಿತಪ್ಪಿಯೂ ಅವನ ಹೆಸರನ್ನು ಈ ಬಂಗ್ಲೇಲಿ ಎತ್ತಬಾರ್ದು ನೀನು...' ಕಲಾವತಿ ಸಿಡುಕಿದಾಗ ಋತು ಮೌನವಾದಳು. ಮಗನನ್ನು ಕಳೆದುಕೊಂಡು ವ್ಯಗ್ರಳಾಗಿರುವ ಚಿಕ್ಕಮ್ಮನ ಜೊತೆ ಎದುರು ಮಾತು ಬೇಡವೆನಿಸಿತು.

ಸ್ವಲ್ಪ ಹೊತ್ತಿಗೆಲ್ಲಾ ಇಬ್ಬರೂ ಪಿ.ಜಿ.ಯ ಮುಂದಿದ್ದರು. ಅವರು ಕೈನೆಟಿಕ್ಕಿನಿಂದ ಇಳಿಯುವ ಹೊತ್ತಿನಲ್ಲೇ ಹೇಮಂತನ ಕೆನೆ ಬಣ್ಣದ ಕಾರು ಬಂದಿತು. ಮರು ಮಾತಾಡದೆ ಋತು, ರಮ್ಯರು ಕೈನೆಟಿಕ್ ಅನ್ನು ಪಿ.ಜಿ.ಯಲ್ಲಿ ಪಾರ್ಕ್ ಮಾಡಿ ಹೇಮಂತನ ಜೊತೆ ಹೊರಟರು.

ಮುಕ್ಕಾಲು ಗಂಟೆಯೊಳಗೆ ಅವನ ಮನೆಯ ಮುಂದೆಯೇ ಕಾರು ನಿಂತಾಗ ರಮ್ಯ ಹುಬ್ಬೇರಿಸಿದಳು.

'ಅಮ್ಮ ಸಂಬಂಧಿಕರ ಮದುವೆಗೆಂದು ಮೈಸೂರಿಗೆ ಹೋಗಿದ್ದಾಳೆ, ಸದ್ಯಕ್ಕೆ ನಾನೊಬ್ನೇ, ನಮ್ಮ ಮನೆಗಿಂತ ಏಕಾಂತದ ಜಾಗ ಬೇಕಾ?' ಹೇಮಂತ ತನ್ನ ಎಂದಿನ ಹಾಸ್ಯದ ಧಾಟಿಯಲ್ಲಿ ಮಾತನಾಡಿದ.

ಋತುವಿನ್ನೂ ಬೇಸರದಲ್ಲೇ ಇದ್ದಳು. ದಾರಿಯುದ್ದಕ್ಕೂ ಹೇಮಂತ, ರಮ್ಯರ ಮಾತುಗಳಲ್ಲಿ ಭಾಗಿಯಾಗದೆ ಸುಮ್ಮನೆ ಕುಳಿತು ಬಿಟ್ಟಿದ್ದಳು.

ಹೇಮಂತ ತನ್ನ ಮನೆಗೆ ಆತ್ಮೀಯವಾಗಿ ಸ್ವಾಗತಿಸಿದ. ಬೇಡವೆಂದರೂ ಬಿಸಿಯಾಗಿ ಟೀ ಮಾಡಿಕೊಂಡು ಬಂದ.

'ಹೇಮಂತ್, ನಿಮ್ಮ ಅಡುಗೆ ಮನೇಲಿ ಯಾವ್ಯಾವ ಸಾಮಾನು ಎಲ್ಲೆಲ್ಲಿದೆ ಅಂತ ತೋರಿಸ್ಬಿಡಿ, ಮಧ್ಯಾಹ್ನದಡುಗೇನ ನಾನೇ ಮಾಡ್ತೀನಿ, ನೀವು ಮೊದ್ಲು ಋತುವನ್ನು ಸಮಾಧಾನ ಮಾಡಿ...' ಟೀ ಕುಡಿಯುತ್ತಾ ಹೇಳಿದಳು ರಮ್ಯ.

ಅವಳೆಂದಂತೆ ಅಡುಗೆ ಮನೆಯ ಸಾಮಾನುಗಳನ್ನೆಲ್ಲಾ ಅವಳಿಗೆ ತೋರಿಸಿ ಋತುವನ್ನು ಮಹಡಿಯ ಮೇಲೆ ಕರೆದೊಯ್ದ ಹೇಮಂತ. ಅವನ ರೂಮಿನಲ್ಲಿ ಇಬ್ಬರೂ ಕುಳಿತುಕೊಂಡು ಮಾತಿಗೆ ತೊಡಗಿದರು.

'ಋತು, ನೀನು ಹೀಗೆ ಮಾಡ್ಬಹುದಾ, ನಿಂಗೆ ಏನಾದ್ರೂ ಆಗಿದ್ರೆ ನಾನು ಬದುಕಿರ್ತೀನಿ ಅಂತ ನೀನು ಅಂದುಕೊಂಡಿದ್ಯಾ, ನಿನ್ನೆ ರಾತ್ರಿ ಆಕಸ್ಮಿಕವಾಗಿ ನಿನ್ನ ಮೆಸೇಜ್ ನೋಡ್ದೆ, ಇಲ್ದೇ ಹೋಗಿದ್ರೆ....ಅಬ್ಬಾ, ನಿನ್ನೆಯದನ್ನು ನೆನಪಿಸಿಕೊಳ್ಳೋಕೆ ಭಯವಾಗುತ್ತೆ...' ಎಂದ ಹೇಮಂತನ ಕಣ್ತುಂಬಾ ನೀರು ತುಂಬಿತು. ಮೆಲ್ಲನೆ ಅವಳ ಬಳಿ ಸರಿದು ಅವಳನ್ನು ಗಾಢವಾಗಿ ಅಪ್ಪಿಕೊಂಡ.

'ಪ್ಲೀಸ್ ಋತು, ಇನ್ಮೇಲೆ ಯಾವತ್ತೂ ನೀನು ಹೀಗೆ ಮಾಡಬಾರ್ದು, ಇದು ನಮ್ಮ ಪ್ರೀತಿಯ ಮೇಲೆ ಆಣೆ...' ಅವನು ಬಡಬಡಿಸುತ್ತಿದ್ದ.

ಋತುವಿಗೂ ತನ್ನ ತಪ್ಪಿನ ಅರಿವಾಗಿತ್ತು.

'ಇಲ್ಲ ಹೇಮಂತ್, ಇನ್ಯಾವತ್ತೂ ಹೀಗೆ ಮಾಡಲ್ಲ, ಇನ್ಮೇಲೆ ಏನೇ ಬಂದ್ರೂ ಧೈರ್ಯವಾಗಿ ಎದುರಿಸ್ತೀನಿ, ನೀನು ನನ್ನ ಜೊತೆಯಿದ್ರೆ ನಂಗಷ್ಟೇ ಸಾಕು..' ಎಂದಳು. ಅವನ ಗಾಢವಾದ ಅಪ್ಪುಗೆಯಲ್ಲಿ ಅವಳು ಕರಗಿಯೇ ಹೋಗಿದ್ದಳು. ಹೇಮಂತ ಅವಳ ಕಂಪೇರಿದ ಮುಖದ ತುಂಬೆಲ್ಲಾ ಚುಂಬನದ ಮುದ್ರೆಯೊತ್ತಿದ.

'ಹೇಳು ಋತು, ನಂದೀಲಿರೋವಾಗ ನಂಗೇನೋ ಸರ್‌ಪ್ರೈಸ್ ಇದೆ ಅಂತಿದ್ಯಲ್ಲ, ಏನದು?' ಸಹಜ ಸ್ಥಿತಿಗೆ ಬರುತ್ತಾ ಅವನು ಕೇಳಿದಾಗ ಋತುವಿನ ಮುಖವೂ ಗಂಭೀರವಾಯಿತು. ರಮ್ಯಾಳ ತಂದೆ ಹರಿಕೃಷ್ಣರು ತನ್ನ ತಾಯಿಯ ಬಗ್ಗೆ ಹೇಳಿದ್ದ ಕೆಲವು ಸತ್ಯಗಳನ್ನು ಅವನಿಗೆ ನಿಧಾನವಾಗಿ ಹೇಳಿದಳು ಋತು. ಕೇಳುತ್ತಾ ಅವನ ಮುಖವೂ ಗಂಭೀರವಾಯಿತು.

'ಓ ಗಾಡ್, ಐ ಕಾಂಟ್ ಇಮ್ಯಾಜಿನ್ ಋತು, ನೀನು ನಂದಿಗೆ ಹೋಗಿದ್ದು ಆ ವಿಷಯ ತಿಳಿದುಕೊಳ್ಳೋಕೇ ಅನ್ನೋ ಹಾಗಿದೆಯಲ್ಲ, ಅದೇ ಆಶ್ಚರ್ಯ....'

'ಹೌದು ಹೇಮಂತ್, ನಾನು ಅಲ್ಲಿಗೆ ಹೋಗ್ದೇ ಇದ್ದಿದ್ರೆ ಅಥವಾ ಅಪ್ಪಾಜಿಯ ಯೋಗ ಮಂದಿರವನ್ನು ನೋಡ್ದೇ ಇದ್ದಿದ್ರೆ ಕೊನೆಯವರೆಗೂ ನಂಗೇನೂ ತಿಳೀತಾನೇ ಇರ್ಲಿಲ್ಲ...'

'ಋತು, ನಾನು ನಿಮ್ಮ ಬಂಗಲೆಗೆ ಭಾವೀ ಅಳಿಯನಾದ್ಮೇಲೆ ಬಹಳಷ್ಟು ವಿಪರೀತಗಳು ನಡೆದಿವೆ, ಅದೂ ಸಾಲದೆಂಬಂತೆ ನನ್ನ ಮೇಲೆ ಅವತ್ತು ಯಾರೋ ಅಟ್ಯಾಕ್ ಬೇರೆ ಮಾಡಿದ್ರು, ನೀನು ಗಾಬರಿಯಾಗ್ತಿ ಅಂತ ನಾನು ಆಕ್ಸಿಡೆಂಟ್ ಎಂದು ಸುಳ್ಳು ಹೇಳಿದ್ದೆ... ಇವನ್ನೆಲ್ಲಾ ನೋಡ್ತಿದ್ರೆ ನಾನು ನಿನ್ನನ್ನು ಮದುವೆಯಾಗುವುದು ಬಂಗಲೆಗೆ ಸಂಬಂಧಿಸಿದ ಯಾರಿಗೋ ಇಷ್ಟವಿಲ್ಲ ಅಂತ ಗೊತ್ತಾಗುತ್ತೆ....ನನ್ನ ಸಂದೇಹ ಕಲಾವತಿಯ ಮೇಲೆಯೇ ಈಗ್ಲೂ ಇದೆ...'